ದಿನಾಂಕ: 22.10.2022ರಂದು ಬೆಳ್ಳಗ್ಗೆ 10.00 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 25.10.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಶಿವಕುಮಾರಯ್ಯ, ಹಿ.ಆ.ಪ
3. ಶ್ರೀ ಮಹೇಶ್.ಎಂ.
4. ಶ್ರೀ ರಾಹುಲ್ ದೇವ್.ಎಂ. ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ವೆಂಕಟೇಶ್ ಮೂರ್ತಿ,
6. ಶ್ರೀ ಮಂಜುನಾಥ್
7. ಶ್ರೀ ವೆಂಕಟೇಶ್, ಕಂದಾಯ ನಿರೀಕ್ಷಕರು
8. ಶ್ರೀ ಚನ್ನಕೇಶವ
9. ಶ್ರೀ ಶಿವರಾಂ, ಅರಣ್ಯ
10. ಶ್ರೀ ಅನಿಕೇಶ್, ಕಿ.ಆ.ಪ
11. ಶ್ರೀ ಲಿಂಗನಗೌಡ

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್, ಮಂಜುನಾಥನಗರ, ಶಿವನಗರ, ಮಹಾಗಣಪತಿನಗರ ಹಾಗೂ 5ನೇ ಬ್ಲಾಕ್ ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮ್ಯಾನ್ ಹೋಲ್ ಗಳಲ್ಲಿ ಮರದ ಬೇರುಗಳು ಮತ್ತು ಇತರ ತ್ಯಾಜ್ಯ ವಸ್ತುಗಳು ಸಂಗ್ರಹಗೊಂಡು ಒಳಚರಂಡಿ ಪೈಪ್ ಗಳು ಬ್ಲಾಕ್ ಆಗಿ ಅಲ್ಲಲ್ಲಿ ಉಕ್ಕಿ ಹರಿಯುವುದನ್ನು ಸಾರ್ವಜನಿಕರು ಸಭೆಗೆ ತಿಳಿಸಿದಾಗ , ಬಿ.ಡಬ್ಲ್ಯೂ.ಎಸ್.ಎಸ್.ಬಿ.ಸಿಬ್ಬಂದಿ ಮತ್ತು ಅಭಿಯಂತರರು ಸಭೆಯಲ್ಲಿ ಹಾಜರಿದ್ದು, ಅಂತಹ ಪ್ರಕರಣವನ್ನು ತುರ್ತಾಗಿ ಕೆಲಸ ನಿರ್ವಹಿಸಿ, ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡಲು ಸಭೆಗೆ ತಿಳಿಸಿರುತ್ತಾರೆ. ಒಂದು ವೇಳೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ನಮ್ಮ ಸಹಾಯ ವಾಣಿಗೆ ನಿಮ್ಮ ದೂರವಾಣಿ ಮುಖಾಂತರ ತಿಳಿಸಿದರೆ ತುರ್ತಾಗಿ ಕೆಲಸ ನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

2. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಭೆಯಲಿದ್ದ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ವಿಳಂಭ ಮಾಡುತ್ತಿರುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ಕೆಲಸ ಪ್ರಗತಿಯಲ್ಲಿದ್ದು, ಇತ್ತೀಚಿನ ದಿನಗಳಲ್ಲಿ ಬಿದ್ದ ಭಾರಿ ಮಳೆಗಳಿಂದ ರಸ್ತೆಯ ಇಕ್ಕೆಲಗಳಲ್ಲಿ ಮರದ ಕೊಂಬೆಗಳು ಬಿದ್ದಿರುವುದನ್ನು ತುರ್ತಾಗಿ ಬೇರೆಡೆಗೆ ಸಾಗಿಸಲು ಕ್ರಮ ವಹಿಸಿರುತ್ತಾರೆ. ಎಂದು ಸಂಬಂಧಪಟ್ಟವರಿಂದ ಮಾಹಿತಿ ಪಡೆಯಲಾಗಿರುತ್ತದೆ.

3. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ ಪ್ರದೇಶ ವ್ಯಾಪ್ತಿಯಲ್ಲಿ ಪ್ರಸ್ತುತ ದಿನಗಳಲ್ಲಿ ಮಳೆ ಬಿದ್ದು, ರಸ್ತೆ ಹದಗೆಟ್ಟಿರುವುದನ್ನು ಸದಸ್ಯರು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಈಗಾಗಲೇ ರಸ್ತೆ ಗುಂಡಿ ಮುಚ್ಚುವ ಕೆಲಸ ಮುಗಿದಿದ್ದು, ಅದರಂತೆ ಸದರಿ ಕೆಲಸವನ್ನು ಮಳೆ ನಿಂತ ತಕ್ಷಣ ನಿರ್ವಹಿಸಿ, ಮುಂದಿನ ಸಭೆಗೆ ವರದಿ ನೀಡುತ್ತೇನೆ ಎಂದು ಸಭೆಗೆ ಮನವಿ ಮಾಡಿರುತ್ತೇನೆ.

(ಸಹಿ) 25/10/22
ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner